<u>ಸಾಕ್ಷಿಯನ್ನು ದಿನಾಂಕಃ**-21-02-2025**ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ-**3**ನೇ ಎದುರುದಾರರ ಪರ ವಕೀಲರಿಂದಃ-</u>

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನ್ಯಾಯಲಯದಲ್ಲಿ ಹಾಜರಪಡಿಸಿದ್ದು, ಅದರಲ್ಲಿ ಬರೆದ ಸಂಗತಿಗಳನ್ನು ನಾನೇ ಹೇಳಿ ಬರೆಯಿಸಿದ್ದು, ಅದು ನಿಜವಿರುತ್ತವೆ ಮತ್ತು ಅದನ್ನು ಓದಿ ನೋಡಿ ತಿಳಿದುಕೊಂಡು ಸಹಿ ಮಾಡಿದ್ದೇನೆ.

ಆಥರಾಯಿಜೇಶನ್ ಲೆಟರನ್ನು ಹಾಜರುಪಡಿಸಿದ್ದು ಅದನ್ನು ನಿಆರ್-1 ಎಂದು, ದ್ವಿಚಕ್ರ ವಾಹನಕ್ಕೆ ಸಂಬಂಧಪಟ್ಟಂತಹ ವಿಮಾ ಪಾಲಿಸಿಯನ್ನು ಹಾಜರುಪಡಿಸಿದ್ದು ಅದನ್ನು ನಿಆರ್-2 ಗುರುತಿಸಲಾಯಿತು.

<u>ಪಾಟೀ ಸವಾಲುಃ- ಅರ್ಜಿದಾರರ ಪರ ವಕೀಲರಿಂದ ಃ-</u>

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಹಾಕಲು ನಾನು ಮಾಹಿತಿ ಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂ.2 ರಲ್ಲಿ ಹೇಳಿರುವ ಸಂಗತಿಗಳನ್ನು ಅರ್ಜಿದಾರನಿಗೆ ಅಪಘಾತದಲ್ಲಿ ಗಾಯಗಳಾಗಿದ್ದರಿಂದ ಅವುಗಳನ್ನು ಪೂರೈಸಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಆದಂತಹ ಗಾಯಗಳ ಬಗ್ಗೆ ನನಗೆ ಮಾಹಿತಿ ಇದೆ. ಅರ್ಜಿದಾರನ ಕಾಲಿಗೆ ಶಸ್ತ್ರ ಚಿಕಿತ್ಸೆ ಮಾಡಿ ರಾಡ್ ಹಾಕಿದ್ದರ ಬಗ್ಗೆ ಮಾಹಿತಿ ಇದೆ. ನಿಆರ್-2 ರ ಪ್ರಕಾರ ಓನರ್ ಡ್ರೈವರ್ ಅಂತಾ 750/- ರೂಪಾಯಿಗಳನ್ನು ತುಂಬಿದ್ದಾನೆ ಎಂದರೆ ಸರಿ. ಸದರಿ ಹಣ ತುಂಬಿಕೊಂಡಿದ್ದರಿಂದ ಅರ್ಜಿದಾರನಿಗೆ ಪರಿಹಾರ ಧನ ಕೊಡಲು 3ನೇ ಎದುರುದಾರರು ಭಾಧ್ಯಸ್ಥರು ಎಂದರೆ ಸರಿಯಲ್ಲ. ಅಪಘಾತವು ಮಿನಿ ಟ್ರಕ್ ಚಾಲಕ ಒಮ್ಮಿಂದೊಮ್ಮೆಲೆ ಬ್ರೆಕ್ ಹಾಕಿದ್ದರಿಂದ ಆಗಿದೆ ಎಂದರೆ ಸರಿ. ಅರ್ಜಿದಾರನ ಯಾವುದೇ ತಪ್ಪು ಇರಲಿಲ್ಲ ಅನ್ನುವುದು ಸರಿಯಲ್ಲ. ಅರ್ಜಿದಾರನಿಗೆ ದ್ವಿಚಕ್ರ ವಾಹನದ ಚಾಲನಾ ಪರವಾನಿಗೆ ಇದೆ ಎಂದರೆ ಸರಿ. ಅರ್ಜಿದಾರನಿಗೆ ಪರಿಹಾರ ಧನ ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ- **2**ನೇ ಎದುರುದಾರರ ಪರ ವಕೀಲರಿಂದ ಃ-</u>

ಈ ಕೇಸಿಗೆ ಸಂಬಂಧಪಟ್ಟಂತಹ ಪೋಲಿಸರು ಸಲ್ಲಿಸಿರುವ ದೋಷಾರೋಪಣಾ ಪಟ್ಟಿಯನು ನೋಡಿದ್ದೇನೆ. ಅರ್ಜಿದಾರನನ್ನು ದೋಷಾರೋಪಣಾ ಪಟ್ಟಿಯಲ್ಲಿ 2ನೇ ಆರೋಪಿ ಎಂದು

ತೋರಿಸಿದ್ದಾರೆ ಎಂದರೆ ಸರಿ. ಮಿನಿ ಟ್ರಕ್ಕಿನ ಚಾಲಕನ ಮೇಲೆ ಅತೀ ವೇಗ ಮತ್ತು ಅಜಾಗರೂಕತೆಗೆ ಸಂಬಂಧಪಟ್ಟಂತೆ ದೋಷಾರೋಪಣಾ ಪಟ್ಟಿ ಸಲ್ಲಿಸಿಲ್ಲ ಎಂದರೆ ಸರಿ. ಅವಿನಾಶ ಕುಡೆ ಇವರು ಕೊಟ್ಟಂತಹ ಪ್ರಥಮ ವರ್ತಮಾನ ಹೇಳಿಕೆಯಲ್ಲಿ ತಾನು ನಡೆಸುತ್ತಿದ್ದ ವಾಹನವನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ನಡೆಸಿಕೊಂಡು ಹೋಗಿ ಮಿನಿ ಟ್ರಕ್ಕಿಗೆ ಡಿಕ್ಕಿಪಡಿಸಿದ್ದಾನೆ ಎಂದು ಬರೆಯಲಾಗಿದೆ ಎಂದರೆ ಸರಿ. ಅರ್ಜಿದಾರ ಅತೀ ವೇಗದಿಂದ ವಾಹನ ಚಾಲನೆ ಮಾಡಿಕೊಂಡು ಹೋಗಿ ನಿಯಂತ್ರಣ ತಪ್ಪಿ ಮಿನಿ ಟ್ರಕ್ಕಿಗೆ ಡಿಕ್ಕಿಪಡಿಸಿದ್ದಾನೆ ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ಅಪಘಾತವು ಅರ್ಜಿದಾರನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಮಿನಿ ಟ್ರಕ್ಕಿನ ತಪ್ಪಿನಿಂದ ಅಪಘಾತವಾಗಿದೆ ಎಂದು ದೋಷಾರೋಪಣಾ ಪಟ್ಟಿಯನ್ನು ಪ್ರಶ್ನಿಸಿಲ್ಲ. ಮಿನಿ ಟ್ರಕ್ಕಿನ ತಪ್ಪಿನಿಂದ ಅಪಘಾತವಾಗದೇ ಇರುವುದರಿಂದ ನಾವು ಅದನ್ನು ಪ್ರಶ್ನಿಸಿಲ್ಲ ಅನ್ನುವುದು ಸರಿಯಲ್ಲ. ದ್ವಿಚಕ್ರ ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿದ್ದು, ಪರಿಹಾರ ಧನ ಕೊಡಲು ನಾವೇ ಭಾಧ್ಯಸ್ಥರು ಎಂದರೆ ಸರಿಯಲ್ಲ. ಅಪಘಾತಕ್ಕೂ ಮತ್ತು ಮಿನಿ ಟ್ರಕ್ಕಿಗೂ ಯಾವುದೇ ಸಂಬಂಧ ಇಲ್ಲ ಅನ್ನುವುದು ಸರಿಯಲ್ಲ. ಪರಿಹಾರ ಧನ ಕೊಡುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಸಹಿ/-
ಸದಸ್ಯರು ಮೋ.ವಾ.ಅ. ಮಂಡಳಿ-5,
ಜಮಖಂಡಿ.